ಅಧ್ಯಕ್ಷರು: ಆಯಿತು, ಇದನ್ನು ಬೇರೆ ರೂಪದಲ್ಲಿ ತರುವುದಕ್ಕೆ ಅವಕಾಶ ಕೊಡುತ್ತೇನೆ.

ಬಾದಾಮಿಯಲ್ಲಿ 110 ಕೆ.ವಿ.ವಿದ್ಯುತ್ ಕೇಂದ್ರ

12 (150)

ಶ್ರೀ ಬಿ.ಬಿ.ಚಿಮ್ಮನ ಕಟ್ಟಿ (ಬಾದಾಮಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿಯಲ್ಲಿ 110 ಕೆ.ವಿ.ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಯಾವಾಗ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ?

ಆ) ಸದರಿ ಕಾಮಗಾರಿಯು ಈಗ ಯಾವ ಹಂತದಲ್ಲಿದೆ?

ಇ) ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಮುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಬಾದಾಮಿಯಲ್ಲಿ 110 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಯೋಜನೆಗೆ ನವೆಂಬರ್ 93ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ. ಆದರೆ ಪವರ್‌ಫೈನಾನ್ಸ್ ಕಾರ್ಪೊರೇಷನ್ ಸಂಸ್ಥೆಯು ಈ ಯೋಜನೆಗೆ ಜುಲೈ 94ರಲ್ಲಿ ಮಂಜೂರಾತಿಯನ್ನು ನೀಡಿತು.

ಆ) ವಿದ್ಯುತ್ ಉಪಕೇಂದ್ರದ ನಿರ್ಮಾಣವು ಪ್ರಗತಿಯಲ್ಲಿದೆ. ನಿಯಂತ್ರಣ ಕೊಠಡಿಯ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದೆ. ಔಟ್‌ಡೋರ್ ಸ್ಟ್ರಕ್ಚರ್ ನಿರ್ಮಾಣವಾಗಿದೆ. ಪವರ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವ ಸಲುವಾಗಿ ಅಡಿಪಾಯ (ಬೆಡ್)ದ ಕೆಲಸ ಮುಗಿದಿದೆ ರಕ್ಷಣಾ ಬೇಲಿಯ ಕೆಲಸ (ಫೆನ್ಸಿಂಗ್ ಕೆಲಸ) ಪ್ರಗತಿಯಲ್ಲಿದೆ. ಕರೆಂಟ್ ಟ್ರಾನ್ಸ್‌ಫಾರ್ಮರ್, ಲೈಟನಿಂಗ್ ಅರೆಸ್ಟರ್ ಐಸೋಲೇಟರ್‌ಗಳಿಗಾಗಿ ಮೌಂಟಿಂಗ್‌ಸ್ಟ್ರಕ್ಚರ್ ನಿಲ್ಲಿಸುವ ಕೆಲಸ ಮುಗಿದಿದೆ. ಸದರೀ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾಗಿರುವ ಪವರ್ ಟ್ರಾನ್ಸ್‌ಫಾರ್ಮರ್, ಸರ್ಕ್ಯೂಟ್ ಬ್ರೇಕರ್ ಇತ್ಯಾದಿ ಮುಖ್ಯ ವಿದ್ಯುತ್ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ.

ಕೆರೂರಿನಿಂದ ಬಾದಾಮಿಗೆ ಸುಮಾರು 23 ಕಿ.ಮೀ. ಉದ್ದದ 110 ಕೆ.ವಿ.ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಸದರೀ ವಿದ್ಯುತ್

ಪ್ರಸರಣಾ ಮಾರ್ಗದ ನಿರ್ಮಾಣಕ್ಕೆ ಬೇಕಾಗಿರುವ ಟವರ್ ಬಿಡಿ ಭಾಗಗಳ ಸರಬರಾಜನ್ನು ಪ್ರಾರಂಭಿಸಲಾಗಿದೆ. ಮಾದರಿ ಟವರ್ ಪರೀಕ್ಷೆ ಮಾಡಲು (ಫ್ರೋಟೋಟೆಸ್ಟ್) ಪರೀಕ್ಷಾ ಕೇಂದ್ರಗಳಿರುವ ನಾಗಪುರ, ಬೆಂಗಳೂರಿನ ಸೆಂಟ್ರಲ್ ಪವರ್ ರೀಸರ್ಚ್ ಇನ್ಸ್‌ಟ್ಯೂಟ್ (ಸಿ.ಪಿ.ಆರ್.ಐ) ಮತ್ತು ಜಬ್ಬಲ್‌ಪುರಗಳಲ್ಲಿ ಟೆಸ್ಟ್ ಬಿಡ್‌ಗಳು ಲಭ್ಯವಿಲ್ಲದೇ ಇದ್ದುದರಿಂದ ಮಾದರಿ ಟವರ್‌ನ (ಫ್ರೊಟೋಟೈಪ್) ಪರೀಕ್ಷೆ ನಿರ್ವಹಿಸುವಲ್ಲಿ ವಿಳಂಬ ಉಂಟಾಯಿತು. ಇದರಿಂದಾಗಿ ಟವರ್ ಬಿಡಿ ಭಾಗಗಳ ಸರಬರಾಜನ್ನು ಪ್ರಾರಂಭಿಸುವಲ್ಲಿ ವಿಳಂಬ ಉಂಟಾಯಿತು.

ಸದರೀ ವಿದ್ಯುತ್ ಪ್ರಸರಣಾ ಮಾರ್ಗವು ಸುಮಾರು 3.3 ಕಿ.ಮೀ. ಉದ್ದಕ್ಕೆ ಅರಣ್ಯಪ್ರದೇಶದಲ್ಲಿ ಹಾದು ಹೋಗುವುದರಿಂದ, ಇದಕ್ಕಾಗಿ ಅರಣ್ಯ ಇಲಾಖೆಯಿಂದ ಅರಣ್ಯ ತೆರವಿಗಾಗಿ ಅನುಮತಿ (ಫಾರೆಸ್ಟ್ ಕ್ಲಿಯರೆನ್ಸ್)ಯನ್ನು ಪಡೆಯಬೇಕಾಗುತ್ತದೆ. ಈ ಸಂಬಂಧ ಅರಣ್ಯ ಇಲಾಖೆಯನ್ನು ಸಂಪರ್ಕಿಸಿದ್ದು, ಅರಣ್ಯ ಇಲಾಖೆಯ ನಿಯಮಗಳನ್ನು ಪಾಲಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ ಭಾಗವನ್ನು ಬಿಟ್ಟು ಉಳಿದ ಭಾಗದಲ್ಲಿ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಇ) ಸದರೀ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾಗಿರುವ ಎಲ್ಲಾ ಪ್ರಮುಖ ವಿದ್ಯುತ್ ಉಪಕರಣಗಳನ್ನು ಈಗಾಗಲೇ ಸರಬರಾಜು ಮಾಡಲಾಗಿದೆ. ಇದರಲ್ಲಿ ಪವರ್ ಟ್ರಾನ್ಸ್‌ಫಾರ್ಮರ್‌ಗಳು ಸರ್ಕ್ಯೂಟ್ ಬ್ರೇಕರ್‌ಗಳು ಸೇರಿವೆ. ಉಳಿದಿರುವ ಕಾಮಗಾರಿಗಳನ್ನು ಸೆಪ್ಟೆಂಬರ್ 98ರ ಅಂತ್ಯದ ವೇಳೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಈ ವಿದ್ಯುತ್ ಉಪಕೇಂದ್ರಕ್ಕೆ ಸಂಬಂಧಿಸಿದ ಕೆರೂರು ಬಾದಾಮಿ 110 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದ್ದು, ಅರಣ್ಯ ಪ್ರದೇಶದಲ್ಲಿ ಹಾದುಹೋಗುವ ಭಾಗಕ್ಕೆ ಅರಣ್ಯ ಇಲಾಖೆಯಿಂದ ಅರಣ್ಯ ತೆರವಿನ ಅನುಮತಿಯನ್ನು (ಫಾರೆಸ್ಟ್ ಕ್ಲಿಯರೆನ್ಸ್) ಆದಷ್ಟು ಶೀಘ್ರಗತಿಯಲ್ಲಿ ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ನಮ್ಮ ಬಾದಾಮಿಯಲ್ಲಿ 100 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕಿನ್ನು 1993-94ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಈಗ 1998 ಅಂದರೆ ಸುಮಾರು ನಾಲ್ಕು ವರ್ಷಗಳು ಗತಿಸಿವೆ. ಇದಕ್ಕೆ ಏನು ಕಾರಣ? ಎಷ್ಟು ಹಣ ಈ ಕಾಮಗಾರಿಗೆ ಈಗಾಗಲೇ ವಿನಿಯೋಗಿಸಿದ್ದೀರಿ? ಇಷ್ಟು ನಾಲ್ಕು ವರ್ಷಗಳು ತಡವಾಗುವುದಕ್ಕೆ ಏನು ಕಾರಣ? ತಾವು ದಯಮಾಡಿ ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ್: ಅಧ್ಯಕ್ಷರೆ, ಕಾಮಗಾರಿಯವರು 1994-95ರ ನವೆಂಬರ್‌ನಲ್ಲಿ ಪಿ.ಎಫ್‌ಸಿ. ಲೋನ್ ಮಾಡಿತ್ತು. ಈಗ 1995-96ರಲ್ಲಿ ಸುಮಾರು 88 ಲಕ್ಷ ಖರ್ಚು ಮಾಡಿದ್ದೇವೆ. 1996-97ರಲ್ಲಿ 1.20 ಲಕ್ಷ ಖರ್ಚು ಮಾಡಿದ್ದೇವೆ. 1997-98ರಲ್ಲಿ 80 ಲಕ್ಷ ಖರ್ಚು ಮಾಡಿ ಈಗಾಗಲೇ ಎರಡೂವರೆ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಹೋದ ಅಧಿವೇಶನದಲ್ಲಿ ಮಾನ್ಯ ಸದಸ್ಯರು ಇದೇ ಪ್ರಶ್ನೆಯನ್ನು ಕೇಳಿದರು. ಕೆರೂರುನಿಂದ ಬಾದಾಮಿಗೆ ಲೈನ್ ಮಾತ್ರ ಬಾಕಿ ಉಳಿದಿದೆ. ಅಲ್ಲಿ ಏನಾಗಿದೆ ಎಂದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಸುಮಾರು 11 ಸಾವಿರ ಎಕರೆ ಫಾರೆಸ್ಟ್ ಲ್ಯಾಂಡ್ ಬರುತ್ತದೆ. ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ಫಾರೆಸ್ಟ್ ಡಿಪಾರ್ಟ್‌ಮೆಂಟನವರು ಮತ್ತು ಕೆ.ಇ.ಬಿ.ನವರು ಮಾರ್ಚ್ 3 ಮತ್ತು 4 ರಂದು ಮೀಟಿಂಗ್ ಮಾಡಿದ್ದಾರೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಆ ಲ್ಯಾಂಡ್‌ನ್ನು ನಮಗೆ ಒದಗಿಸಿದ ಎರಡು ತಿಂಗಳೊಳಗಾಗಿ ನಾವು ಕೆಲಸವನ್ನು ಮಾಡಿ ಮುಗಿಸುತ್ತೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ಅಡತಡೆ ಇದೆ ಎಂದು ಹೇಳುವುದಾದರೆ ಅದು ತಪ್ಪು. ಒಂದು ವೇಳೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ಅಡತಡೆ ಇದ್ದರೆ ಇಲ್ಲಿಯವರೆಗೆ ಯಾವ ಅಧಿಕಾರಿಗಳು ಕೂಡ ಅದನ್ನು ಏಕೆ ಫಾಲೋಅಪ್ ಮಾಡಲಿಲ್ಲ. ಇದಕ್ಕೆ ಸರ್ಕಾರ ಇಷ್ಟು ನಿರ್ಲಕ್ಷ್ಯ ಮಾಡುವುದಕ್ಕೆ ಏನು ಕಾರಣ? ಸುಮಾರು ಎರಡೂವರೆ ಕೋಟಿ ರೂ.ಗಳಷ್ಟು ಹಣವನ್ನು ಈ ಯೋಜನೆಗಾಗಿ ಇನ್‌ವೆಸ್ಟ್ ಮಾಡಿದಾದ ಮೇಲೆ ಕೇವಲ ಅರಣ್ಯ ಇಲಾಖೆಯ ಅಡತಡೆ ಎಂದರೆ ಹೇಗೆ? ಅರಣ್ಯ ಇಲಾಖೆಯ ಒಪ್ಪಿಗೆಯನ್ನು ಸುಮಾರು ನಾಲ್ಕು ವರ್ಷಗಳಾದರೂ ತೆಗೆದುಕೊಳ್ಳಲಿಲ್ಲ ಎಂದರೆ ಈ ಯೋಜನೆಯ ಗತಿ ಏನಾಗಬೇಕು? ಇದರಿಂದ ಸರ್ಕಾರಕ್ಕೆ ಒಂದು ದೊಡ್ಡ ಹೊರೆ ಬೀಳುತ್ತದೆ. ಅರಣ್ಯ ಇಲಾಖೆಯ ಒಂದು ಕಾರಣ ಹೇಳಿದ್ದಾರೆ. ಮತ್ತೊಂದು ಕಾರಣ ಏನೆಂದರೆ, ಗುತ್ತಿಗೆದಾರರು ಏನಿದ್ದಾರೆ ಅವರ ಕಡೆಯಿಂದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಸಾಧ್ಯವಾಗುತ್ತ ಇಲ್ಲ. ನಾಲ್ಕು ವರ್ಷಗಳಿಂದ ಎಷ್ಟು ಜನ ಗುತ್ತಿಗೆದಾರರನ್ನು ನೀವು ಬದಲಾವಣೆ ಮಾಡಿದ್ದೀರಿ? ಗುತ್ತಿಗೆದಾರರಿಗೆ ಏನಾದರೂ ನೋಟಿಸ್ ಕೊಟ್ಟು ಅವರ ಲೈಸೆನ್ಸ್ ರದ್ದುಮಾಡುವುದಕ್ಕೆ ಬರೆದಿದ್ದರೋ? ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಯೋಜನೆಯನ್ನು ಎಷ್ಟು ತಿಂಗಳಲ್ಲಿ ಮುಗಿಸುತ್ತೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ: ಮಾರ್ಚ್ 3-4 ರಂದು ಕೆ.ಇ.ಬಿ. ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಎರಡೂ ಒಟ್ಟಿಗೆ ಮೀಟಿಂಗ್ ಮಾಡಿದೆ. ಆದಷ್ಟು ಬೇಗ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಲ್ಯಾಂಡ್ ನಮ್ಮ ವಶಕ್ಕೆ ಕೊಟ್ಟರೆ ಎರಡು ತಿಂಗಳಲ್ಲಿ ಕೆಲಸವನ್ನು ಮಾಡಿ ಮುಗಿಸುತ್ತೇವೆ.

ಅಧ್ಯಕ್ಷರು: ಆ ಗುತ್ತಿಗೆದಾರರಿಂದ ಏನಾದರೂ ತೊಂದರೆಯಾಗುತ್ತಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ: ಕಳೆದ ಅಧಿವೇಶನದಲ್ಲಿ ಮಾನ್ಯ ಸದಸ್ಯರು ಇದರ ಬಗ್ಗೆ ಪ್ರಸ್ತಾಪಮಾಡಿದ್ದರು. ಆಗ ಇನ್ನೂ ಲೈನ್ ವರ್ಕ್‌ಗೆ ಮೆಟೀರಿಯಲ್ಸ್ ಕೂಡ ಕಳುಹಿಸಿರಲಿಲ್ಲ. ಈಗ ಏನು ಗುತ್ತಿಗೆದಾರರಿಂದ ತೊಂದರೆ ಇಲ್ಲ. ಅಟ್ ಪ್ರೆಸೆಂಟ್ ಬೇರೆ ಕಡೆ ಕೆಲಸ ನಡೆಯುತ್ತಿದೆ. ಈ ಒಂದು ಕೆಲಸ ಮಾತ್ರ ಫಾರೆಸ್ಟ್ ಏರಿಯಾಕ್ಕೆ ಬರತಕ್ಕಂಥದ್ದು ಮಾತ್ರ ನಿಂತಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಮ್ಮ ಪ್ರಶ್ನೆಯ 'ಉದ್ದೇಶ ಏನೆಂದರೆ, ಮೊದಲನೆಯದಾಗಿ ಈ ಯೋಜನೆಯ ಬಗ್ಗೆ, ಕಾಮಗಾರಿಯ ಬಗ್ಗೆ ಮಾಹಿತಿ ಪಡೆಯುವುದು. ಎರಡನೆಯದಾಗಿ ಅದೇರೀತಿಯಲ್ಲಿ ಅದೇ ಸಂದರ್ಭದಲ್ಲಿ ಸರ್ಕಾರ ಕೂಡ ಇದಕ್ಕೆ ಪರಿಹಾರ ಒದಗಿಸಬೇಕಾಗುತ್ತದೆ. ನಾನು ಸುಮಾರು ಮೂರು ವರ್ಷಗಳಿಂದ ಇದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆದರೆ ಪ್ರತಿಫಲ ಸಿಗುತ್ತಿಲ್ಲ. ಇದಕ್ಕೆ ಯಾರೂ ಕೂಡ ಉತ್ತರ ಹೇಳುತ್ತಿಲ್ಲ.

ಶ್ರೀ ಶರಣಬಸಪ್ಪ ದರ್ಶಾನಾಪುರ: ನಾವು ಕಳೆದ ಅಧಿವೇಶನದಲ್ಲಿ ಇನ್ನೂ ಮೆಟೀರಿಯಲ್ಸ್ ಅಲ್ಲಿಗೆ ಕಳುಹಿಸಿರಲಿಲ್ಲ. ಎಂಟನೇ ತಿಂಗಳಲ್ಲಿ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ನಾವು ಎಲ್ಲಾ ಮೆಟೀರಿಯಲ್ಸ್‌ನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ.

ಸೊರಬ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ

13 (126)

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರ ಬಗರ್ ಹುಕುಂ ಜಮೀನನ್ನು ಸಕ್ರಮಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಹಾಗೂ ಯಾವಾಗ ಖಾಯಂ ಮಾಡಲಾಗುವುದು?

ಶ್ರೀ ಜೆ.ಹೆಚ್.ಪಟೀಲ್ (ಮುಖ್ಯಮಂತ್ರಿಗಳು):

ಅ) ಸರ್ಕಾರಿ ಜಮೀನುಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರುಗಳಿಗೆ ಅಂತಹ ಜಮೀನುಗಳ ಸಕ್ರಮೀಕರಣದ ಬಗ್ಗೆ 1964ರ ಭೂ ಕಂದಾಯ ಕಾಯಿದೆಯ 94(ಎ) ಕಲಂ ರೀತ್ಯ ಸಕ್ರಮೀಕರಿಸಲು ಅವಕಾಶವಿದೆ. ಈ ಬಗ್ಗೆ 1966ರ ಕರ್ನಾಟಕ ಭೂ ಕಂದಾಯ ನಿಯಮಾವಳಿ 108 (ಬಿ)ಯಿಂದ 108 (ಎನ್) ವರೆಗೆ ನಿಯಮಗಳನ್ನು ರಚಿಸಲಾಗಿದ್ದು ಸಕ್ರಮೀಕರಣಗೊಳಿಸುವ ಬಗೆಗೆ ಸಕ್ರಮೀಕರಣ